ಕಥೆ

# ಆಜಾನೊ ಚಂದ್ರಮ




**ಕೇಶವರೆಡ್ಡಿ ಹಂದ್ರಾಳ**

ಕಲೆ: ವಿಶ್ವನಾಥ್ ಎ.ಎಸ್


ಅರೆರೆ ಕಣ್ಣು ಬಿಟ್ಟಳು ಚಂದಿರೆ, ನನ್ನ ನಗುವಿನ ನಯಾಗರ. ಆಸ್ಪತ್ರೆಯ ಐಸಿಯು ಬೆಡ್ ಮೇಲೆ ಮಲಗಿದ್ದವಳ ಪ್ರಜ್ಞೆಗಾಗಿ ಆರು ದಿನಗಳಿಂದ ಚಾತಕ ಪಕ್ಷಿಯಂತೆ ಕಾಯುತ್ತಿದ್ದ ನಾನು ಸಂಭ್ರಮದ ಎವರೆಸ್ಟ್ ಶಿಖರವನ್ನು ಏರಿದ್ದೆ.

ಇವಳು ನನ್ನ ಸಂಗಾತಿಯಾದಾಗಿನಿಂದಲೂ ಗಂಗೆಯಂತೆ ಎಡರುತೊಡರುಗಳನ್ನು ಲೆಕ್ಕಿಸದೆ ನನ್ನನ್ನೂ ಅಪ್ಪಿಕೊಂಡು ಬದುಕಿನಲ್ಲಿ ಉತ್ಸಾಹದಿಂದ ಹರಿದವಳು. ಒಮ್ಮೆಯೂ ಆಸ್ಪತ್ರೆಗೆ ಕಾಲಿಟ್ಟವಳಲ್ಲ, ಒಂದು ಇಂಜೆಕ್ಷನ್ ತೆಗೆದುಕೊಂಡವಳಲ್ಲ, ಒಂದು ಮಾತ್ರೆ ನುಂಗಿದವಳಲ್ಲ. ಇವಳನ್ನು ಜಿ.ಪಿ ಎಂದೇ ನಾನು ಕರೆಯುತ್ತಿದ್ದದ್ದು; ಅಯ್ಯಯ್ಯೋ ಜಿ.ಪಿ ಅಂದರೆ ಗಟ್ಟಿ ಪಿಂಡ. ಹಾಗೆ ಕರೆದಾಗಲೆಲ್ಲ ಕಣ್ಣುಬ್ಬು ಎಗರಿಸಿ ಮುಖದ ತುಂಬೆಲ್ಲಾ ಡೌಲು ತುಂಬಿಕೊಳ್ಳುತ್ತಿದ್ದಳು. 'ಅರೆ, ನಿನ್ನ ಕಣ್ಣಲ್ಲಿ ನೀರು. ಅಯ್ಯೋ ಗುಲ್ದುಖಾನ್, ಯಾಕೋ ಆಸ್ಪತ್ರೆಯ ಬೆಡ್ ಮೇಲೆ ಕಟ್ಟಿ ಹಾಕಿಸಿದ್ದೀಯಲ್ಲೋ. ಏನಾಗಿತ್ತು ನನಗೆ. ಗಟ್ಟಿ ಪಿಂಡಕ್ಕೆ ಏನು ಗ್ರಹಚಾರ ಬಂತೊ...' ಅವಳ ಮಾಮೂಲಿ ತಮಾಷೆಯ ಮಾತುಗಳಿಗೇನೂ ಗರ ಬಡಿದಿರಲಿಲ್ಲ. ಮುಖದಲ್ಲಿ ಆಯಾಸ ಇಣಕಿತ್ತು. 'ನಿನ್ನ ಹಾರ್ಟ್ ಅರೆಸ್ಟ್ ಆಗಿತ್ತು...'

ನನ್ನ ಮಾತು ಮುಗಿಯುವ ಮೊದಲೇ 'ಆಹಾ ಆಹಾ ಸಾಕು ಮಾಡು ನಿನ್ನ ಮೋಡಿ ಮಾಡುವ ಮಾತು. ಹೃದಯವನ್ನ ಯಾರಾದರೂ ಅರೆಸ್ಟ್ ಮಾಡಲಿಕ್ಕಾಗುತ್ತಾ ಕಳ್ಳ. ನಾನು ಸೈನ್ಸ್ ಸ್ಟೂಡೆಂಟ್ ಅಲ್ದೆ ಇರಬಹುದು. ಆದರೆ ಸೈನ್ಸ್ ಓದಿದವರಿಗಿಂತಲೂ ಹಾರ್ಟ್ ಬಗ್ಗೆ ಹೆಚ್ಚಾಗಿ ತಿಳ್ಕೊಂಡಿದ್ದೀನಿ, ನಮ್ಮಪ್ಪ ನನ್ನ ಆಸೆಯಂತೆ ನನ್ನನ್ನ ಎಂಬಿಬಿಎಸ್ ಗೆ ಸೇರಿಸಿದ್ದಿದ್ದರೆ ಇದೇ ಆಸ್ಪತ್ರೆಗೆ ಇವೊತ್ತು ಸೀನಿಯರ್ ವಿಸಿಟಿಂಗ್ ಡಾಕ್ಟರ್ ಆಗಿರ್ತಿದ್ದೆ ಗೊತ್ತಾ. ಪಾಪ, ಅವೊತ್ತು ಅಪ್ಪನ ಹತ್ರ ಪೈಸೆ ಇರ್ಲಿಲ್ಲ. ಇರ್ಲಿ ಬಿಡು, ಇವೊತ್ತು ನಾನೇನೂ ಕಮ್ಮಿಯಿಲ್ಲ. ಐಯ್ಯಾಮ್ ಪ್ರೌಡ್ ಟು ಬಿ.ಎ ಮದರ್ ಆಫ್ ಅನ್ ಐಪಿಎಸ್ ಆಫೀಸರ್. ರಿಯಲಿ ಅನ್ ಹಾರ್ಟ್ ಸ್ಟೂಡೆಂಟ್ ಐಯ್ಯಾಮ್. ನಂಗೊತ್ತು ಹೃದಯವನ್ನು ಕದಿಯಬಹುದು ಬೇಕಾದರೆ ನಿನ್ನಂತೆ, ನಿನ್ನ ಕಥೆಗಳಂತೆ. you have broken my heart long back...' ಮಾತುಗಳೊಂದಿಗೆ ನಕ್ಕವಳ ಕಣ್ಣಲ್ಲಿ ಮುತ್ತು ಜಾರಿತ್ತು.

'ನನಗೆ ತುಂಬಾನೆ ಭಯವಾಗಿತ್ತು. ನೋಡು, ನನ್ನ ಕಣ್ಣು ನಿದ್ದೆಗೆಟ್ಟು ಕೆಂಪಗಾಗಿರೋದು. ಅಟೆಂಡರ್ಸ್ ಲಾಂಜ್ನಲ್ಲಿ ಕುಳಿತು ನಿನ್ನದೆ ಧ್ಯಾನ ಮಾಡುತ್ತಿದ್ದೆ...' ಅಷ್ಟರಲ್ಲಿ ಡಾಕ್ಟರ್ ಬಂದಿದ್ದರು. ಇವಳ ಕೇಸ್ ಶೀಟನ್ನು ಪರಿಶೀಲಿಸಿದ ಡಾಕ್ಟರ್ 'ಡೋಂಟ್ ವರಿ, ಶಿ ಈಜ್ ಡೂಯಿಂಗ್ ವೆಲ್. ಆದರೂ ಇನ್ನೂ ಏನೂ ಹೇಳುವಂತಿಲ್ಲ. ನಾವು ಮಾಡೋದೆಲ್ಲವನ್ನೂ ಮಾಡಿದ್ದೇವೆ, ಇನ್ನು ದೇವರಿದ್ದಾನೆ' ಎಂದು ಹೇಳಿ ಮುಂದಿನ ಪೇಶೆಂಟ್ ಕಡೆ ನಡೆದಿದ್ದರು.